ಆ) ವಾರ್ಷಿಕ ಆದಾಯ ರೂ.೩೫೦೦–೦೦ ರೊಳಗೆ ಇರುವ ಎಲ್ಲಾ ಗ್ರಾಮಾಂತರ ಹಾಗೂ ೨೦,೦೦೦ ಮತ್ತು ಅದಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳ ಪಟ್ಟಣ ಪ್ರದೇಶದಲ್ಲಿ ಇರುವ ಎಲ್ಲಾ ಕುಟುಂಬಗಳು, ಭೂರಹಿತ ಕೃಷಿ ಕಾರ್ಮಿಕರು, ಪ್ಲಾಂಟೇಷನ್ ಕಾರ್ಮಿಕ ಕುಟುಂಬಗಳು, ಗ್ರಾಮಾಂತರ ಕುಶಲ ಕರ್ಮಿಗಳು, ಸಣ್ಣ–ಮಧ್ಯಮ ಹಿಡುವಳಿದಾರರು ಮತ್ತು ಸರ್ಕಾರದಿಂದ ಪೆನ್‌ಷನ್ ಪಡೆಯುತ್ತಿರುವ, ವೃದ್ಧಾಪ್ಯ ಅಂಗವಿಕಲ ಹಾಗೂ ವಿಧವಾ ವೇತನಗಳನ್ನು ಪಡೆಯುತ್ತಿರುವ ಕುಟುಂಬಗಳು, ಹಸಿರು ಕಾರ್ಡ್‌ನ್ನು ಪಡೆಯಲು ಅರ್ಹರಾಗಿರುತ್ತಾರೆ. ರಾಜ್ಯದಲ್ಲಿರುವ ತಾಲ್ಲೂಕು ತಹಶೀಲ್ದಾರ್‌ರವರು ಅವರ ಹಿಬ್ಬಂದಿ ಮೂಲಕ ಹಸಿರು ಕಾರ್ಡ್‌ಗಳನ್ನು ಈ ಹಿಂದೆ ವಿತರಣೆ ಮಾಡಿರುತ್ತಾರೆ. ಈಗ ಹಸಿರು ಪಡಿತರ ಚೀಟಿಗಳನ್ನು ಜಿಲ್ಲಾ ಪರಿಷತ್‌ನವರು ವಿತರಣೆ ಮಾಡುತ್ತಾರೆ.

ಇ) ಈ ವಿಷಯದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗಿದ್ದು ಇದುವರೆಗೆ ೩೫,೭೧೦ ಅನರ್ಹ ಕುಟುಂಬಗಳಿಗೆ ವಿತರಿಸಿದ ಹಸಿರು ಕಾರ್ಡುಗಳನ್ನು ರದ್ದುಪಡಿಸಿ, ಅರ್ಹ ೧೨,೪೦೫ ಕುಟುಂಬಗಳಿಗೆ ಹಸಿರು ಕಾರ್ಡುಗಳನ್ನು ವಿತರಿಸಲಾಗಿರುತ್ತದೆ.

ಶ್ರೀ ಎಂ. ಸಿ. ಕುನ್ನೂರ್.—ಮಾನ್ಯ ಅಧ್ಯಕ್ಷರೇ, ಹಸಿರು ಕಾರ್ಡ್‌ಗಳನ್ನು ಹಂಚುವಾಗ ಬಡವರಿಗೆ ಅನ್ಯಾಯವಾಗಿರತಕ್ಕಂಥಾದ್ದು ನಿಜ ಎಂದು ಸರ್ಕಾರ ಒಪ್ಪಿಕೊಂಡಿದೆ ಆದರೆ ನಾವು ಹಳ್ಳಿಗಳಿಗೆ ಹೋದಾಗ ಪ್ರತಿಯೊಬ್ಬರೂ ಹಸಿರು ಕಾರ್ಡ್ ಹಂಚಬೇಕೆಂದು ನಮ್ಮನ್ನು ಕೇಳುತ್ತಿದ್ದಾರೆ. ನಮಗೆ ಗರಿಬಿ ಹಠಾವೋ ಕಾರ್ಯಕ್ರಮದಲ್ಲಿ ಸಂಬಿಕೆ ಇರುವಾಗ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು ೮ ತಿಂಗಳಾದರೂ ಕೂಡ ಇವತ್ತಿನವರೆಗೆ ಹಸಿರು ಕಾರ್ಡ್‌ಗಳ ವಿತರಣೆಯನ್ನು ಸರಿ ಮಾಡುವುದಕ್ಕೆ ಆಗಲಿಲ್ಲ. ಈ ಹಸಿರು ಕಾರ್ಡ್‌ಗಳನ್ನು ಇನ್ನು ಎಷ್ಟು ದಿವಸಗಳಲ್ಲಿ ಯಾವ ರೀತಿಯಲ್ಲಿ ತಾವು ಹಂಚುತ್ತೀರಿ ಮತ್ತು ಇದನ್ನು ತಾವು ಯಾವ ರೀತಿ ಸರಿ ಮಾಡುತ್ತೀರಿ ? ಎನ್ನುವುದನ್ನು ತಿಳಿಸಬೇಕು.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಆಹಾರ ಮಂತ್ರಿಗಳ ಬೇಡಿಕೆ ಬಂದಾಗ ಈ ವಿಷಯದ ಬಗ್ಗೆ ಒಂದು ಸ್ಪಷ್ಟವಾದ ನೀತಿ ಮತ್ತು ಏನು ಕಾರ್ಯಕ್ರಮ ಜಾರಿ ಗೊಳಿಸುತ್ತಾರೆ ಎನ್ನುವ ಬಗ್ಗೆ ಉತ್ತರ ಕೊಟ್ಟಿದ್ದಾರೆ. ಆದ್ದರಿಂದ ಈ ಬಗ್ಗೆ ಒಂದು ಹೊಸ ನೀತಿಯನ್ನು ರೂಪಗೊಳಿಸಲಾಗುತ್ತದೆ. ಸದ್ಯದಲ್ಲಿಯೇ ಅವರು ಇದನ್ನು ಸರಿ ಮಾಡುತ್ತಾರೆ

ಪಡಿತರ ವಸ್ತುಗಳ ವಿತರಣೆಯಲ್ಲಿ ಕಡಿತ

೫೫೧ (೧೨೭೨) ಶ್ರೀ ಹರ್ಷಕುಮಾರ ಗೌಡ (ಚಾಮರಾಜ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಮೈಸೂರು ನಗರದ ನಾಗರೀಕರಿಗೆ ಪಡಿತರ ವಸ್ತುಗಳಾದ ಸಕ್ಕರೆ, ತಾಳಿಎಣ್ಣೆ ಮತ್ತು ಗೋಧಿಯ ಪ್ರಮಾಣದಲ್ಲಿ ಕಡಿತಗೊಳಿಸಿರುವುದು ಸರ್ಕಾರಕ್ಕೆ ತಿಳಿದಿದೆಯೆ ?

ಆ) ಹಾಗಿದ್ದಲ್ಲಿ, ಅದನ್ನು ಹೆಚ್ಚುವರಿ ಮಾಡಲು ಸರಕಾರ ಕೈಗೊಂಡ ಕ್ರಮಗಳೇನು ?

ಇ) ಕಳಪೆದರ್ಜೆಯ ಅಕ್ಕಿ, ಗೋಧಿ ವಿತರಣೆ ಮಾಡುತ್ತಿರಲು ಕಾರಣವೇನು ?

ಈ) ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಮತ್ತು ಸಂದೀಯ ವ್ಯವಹಾರಗಳ ಸಚಿವರು) (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರ ಪರವಾಗಿ).—

ಅ) ಇಲ್ಲ. ಬದಲಾಗಿ ಏರಿಕೆ ದಿಸೆಯಲ್ಲಿದೆ.

ಆ) ಉದ್ಭವಿಸುವುದಿಲ್ಲ.

ಇ) ಭಾರತ ಆಹಾರ ನಿಗಮದವರು ಕೆಲವು ಸಲ ಕಳಪೆ ದರ್ಜೆಯ ಆಹಾರ ಧಾನ್ಯಗಳನ್ನು ಪೂರೈಸಿದ ಸಂದರ್ಭಗಳನ್ನು ಹೊರತು ಪಡಿಸಿ ಸಾಮಾನ್ಯವಾಗಿ ಉತ್ತಮ ದರ್ಜೆಯ ಅಕ್ಕಿ ಮತ್ತು ಗೋಧಿಯನ್ನು ಸಾರ್ವಜನಿಕ ವಿತರಣಾ ಯೋಜನೆಯಡಿಯಲ್ಲಿ ಪೂರೈಸಲಾಗುತ್ತಿದೆ.

ಈ) ಭಾರತ ಆಹಾರ ನಿಗಮದವರಿಗೆ ಉತ್ತಮ ದರ್ಜೆ ಅಕ್ಕಿಯನ್ನು ಸರಬರಾಜು ಮಾಡಲ್ಲ ಕೋರಲಾಗಿದೆ. ಸಗಟು ವ್ಯಾಪಾರಿಗಳಾರರು ಸದರೀ ನಿಗಮದ ಗೋಡಾನುಗಳಿಂದ ಅಕ್ಕಿಯನ್ನು

ಪರೀಕ್ಷಿಸಿ ಉತ್ತಮ ದರ್ಜೆಯ ಅಕ್ಕಿಯನ್ನು ಮಾತ್ರ ಎತ್ತುವಳಿ ಮಾಡುವಂತೆ ಸೂಚಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಸೂಕ್ತ ನಿರ್ದೇಶನಗಳನ್ನು ಹೊರಡಿಸಲಾಗಿದೆ.

ಶ್ರೀ ಹರ್ಷಕುಮಾರ್ ಗೌಡ.—ಮಾನ್ಯ ಅಧ್ಯಕ್ಷರೇ, ನಾನು ಮೈಸೂರು ನಗರದ ನಾಗರೀಕರಿಗೆ ಪಡಿತರ ವಸ್ತುಗಳಾದ ಸಕ್ಕರೆ ತಾಳೆ ಎಣ್ಣೆ ಮತ್ತು ಗೋಧಿ ಪ್ರಮಾಣದಲ್ಲಿ ಕಡಿತಗೊಳಿಸಲಾಗಿದೆ ಎಂದು ಪ್ರಶ್ನೆ ಕೇಳಿದ್ದಕ್ಕೆ ಸರ್ಕಾರದವರು ಉತ್ತರ ಕೊಡುತ್ತಾ ಕಡಿತಗೊಳಿಸಿಲ್ಲ ಬದಲಾಗಿ ಏರಿಕೆ ದಿಸೆಯಲ್ಲಿ ಇದೆ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ ಹಿಂದೆ ಮೈಸೂರು ನಗರದಲ್ಲಿ ಒಂದು ಕಾರ್ಡ್‌ಗೆ ಸಕ್ಕರೆ ೫ ಕೆ.ಜಿ ಕೊಡುತ್ತಿದ್ದರು. ಅದನ್ನು ಈಗ ೩ ಕೆ.ಜಿ.ಗೆ ಇಳಿಸಿದ್ದಾರೆ. ಕನಿಷ್ಟ ೨ ಕೆ.ಜಿ. ಸಕ್ಕರೆ ಕಡಿಮೆ ಮಾಡಿದ್ದಾರೆ. ಆದರೆ ಮೈಸೂರು ನಗರದ ನಾಗರೀಕರಿಗೆ ಒಂದು ಕಾರ್ಡ್‌ಗೆ ೨ ಕೆ.ಜಿ. ಸಕ್ಕರೆ ಕಡಿಮೆ ಮಾಡಿದರೆ ಇದನ್ನು ನಾವು ಲೆಕ್ಕ ಹಾಕುವುದಾದರೆ ಇದರಲ್ಲಿ ಕಾಳ ಸಂತೆ ವ್ಯವಸ್ಥೆಯಾಗುತ್ತದೆ. ಎಂದು ತಿಳಿಯಬೇಕಾಗುತ್ತದೆ. ಇವತ್ತಿನ ಗ್ರಾಹಕರು ಮಾರುಕಟ್ಟೆಯಲ್ಲಿ ಈ ವಸ್ತುಗಳನ್ನು ಖರೀದಿ ಮಾಡುವಂತಹ ಪರಿಸ್ಥಿತಿಯಲ್ಲಿ ಇಲ್ಲ. ಆದ್ದರಿಂದ ಈ ರೀತಿ ಗ್ರಾಹಕರಿಗೆ ಇವರು ಏನು ಅನ್ಯಾಯ ಮಾಡುತ್ತಿದ್ದಾರೆ ಈ ಒಂದು ಗಂಡಾತರದಿಂದ ತಪ್ಪಿಸುವುದಕ್ಕೆ ಸಾಧ್ಯವಾಗುವುದಿಲ್ಲವೇ ? ಇದರ ಜೊತೆಗೆ ಇವತ್ತು ಇಡೀ ಕರ್ನಾಟಕ ರಾಜ್ಯದಲ್ಲಿ ಮತ್ತು ಮೈಸೂರು ನಗರದಲ್ಲಿ ಕಾಳಸಂತೆಯಲ್ಲಿ ಈ ವಸ್ತುಗಳು ಮಾರಾಟವಾಗುತ್ತಿವೆ. ಮತ್ತು ಕೇಂದ್ರ ಸರ್ಕಾರದ ನೀತಿಯಿಂದ ಸೀಮೆ ಎಣ್ಣೆ ಅಭಾವವನ್ನು ನಮ್ಮ ನಾಗರೀಕರು ಎದುರಿಸುತ್ತಿದ್ದಾರೆ. ಇದರ ಜೊತೆಗೆ ಇವತ್ತು ಸೀಮೆ ಎಣ್ಣೆಯಲ್ಲಿ ಕಲಬೆರಕೆಯಾಗುತ್ತಿದೆ. ಮೈಸೂರು ನಗರದಲ್ಲಿ ಮತ್ತು ಇಡೀ ಕರ್ನಾಟಕ ರಾಜ್ಯದಲ್ಲಿ ಸೀಮೆಎಣ್ಣೆ ಕಲಬೆರಕೆಯಾಗುತ್ತಿದೆ ಮತ್ತು ಇದರಿಂದ ಪರಿಸರ ಮಾಲಿನ್ಯ ಕೂಡ ಆಗುತ್ತಿದೆ. ಇದರಿಂದ ಶ್ರೀಸಾಮಾನ್ಯನು ತೊಂದರೆಗೆ ಒಳಪಟ್ಟಿದ್ದಾನೆ. ಅವನನ್ನು ಈ ಒಂದು ದಾರುಣ ಪರಿಸ್ಥಿತಿಗೆ ನಾವು ದೂರುತ್ತಿದ್ದೇವೆ. ಶ್ರೀಸಾಮಾನ್ಯನನ್ನು ಇಂತಹ ದಾರುಣ ಪರಿಸ್ಥಿತಿಗೆ ದೂಡಿರತಕ್ಕಂಥ ಅಧಿಕಾರಿಗಳ ಮೇಲೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಈ ಅಭಾವಕ್ಕೆ ಕಾರಣವೇನು ? ಇದಕ್ಕೆ ಕೇಂದ್ರ ಸರ್ಕಾರದ ನೀತಿಯೇ ಕಾರಣ. ಇವತ್ತಿನ ದಿವಸ ನಮ್ಮ ಗ್ರಾಹಕರಿಗೆ ಸೀಮೆ ಎಣ್ಣೆ ಮತ್ತು ಪೆಟ್ರೋಲ್ ಸಿಗದೆ ಬಹಳ ತೊಂದರೆಯಾಗಿದೆ. ಇದನ್ನು ಸರಿಮಾಡುವುದಕ್ಕೆ ತಾವು ಯಾವ ರೀತಿ ಕಾರ್ಯಕ್ರಮ ಹಾಕಿಕೊಳ್ಳುತ್ತೀರಿ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಪ್ರಶ್ನೆಗೆ ನಾನು ಉತ್ತರ ಒದಗಿಸಿದ್ದೇನೆ. ಈಗ ಅವರು ಹೊಸದಾಗಿ ಕೆಲವು ಪ್ರಶ್ನೆಗಳನ್ನು ಎತ್ತಿದ್ದಾರೆ. ಕಲಬೆರಕೆ ಮತ್ತು ಅಕ್ರಮ.....

ಅಧ್ಯಕ್ಷರು.—ನೀವು ಅವೆಲ್ಲವನ್ನು ಬಿಟ್ಟು, ಒಂದು ಕಾರ್ಡಿಗೆ ೫ ಕೆ.ಜಿ. ಸಕ್ಕರೆ ಕೊಡುತ್ತಿದ್ದು ಅದು ಈಗ ೩ ಕೆ.ಜಿ.ಗೆ ಇಳಿಸಿದ್ದಾರೆಂದು ಅವರು ಹೇಳಿದರು. ಅದಕ್ಕೆ ಮಾತ್ರ ತಾವು ಉತ್ತರ ಹೇಳಿದರೆ ಸಾಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಮೈಸೂರು ನಗರದಲ್ಲಿ ಪಡಿತರ ವಸ್ತುಗಳ ಹಂಚಿಕೆ ಕಡಿಮೆ ಆಗಿಲ್ಲ, ಇನ್ನೂ ಹೆಚ್ಚು ಆಗಿದೆ. ನಾವು ಏಪ್ರಿಲ್ ತಿಂಗಳಲ್ಲಿ ಒಂದು ಕಾರ್ಡಿಗೆ ೧೭ ಕೆ.ಜಿ. ಅಕ್ಕಿಯನ್ನು ಕೊಟ್ಟಿದ್ದರೆ ಜೂನ್ ತಿಂಗಳಲ್ಲಿ ೧೮ ಕೆ.ಜಿ. ಕೊಟ್ಟಿದ್ದೇವೆ. ಅದೇ ರೀತಿ ಗೋಧಿ ಏಪ್ರಿಲ್ ತಿಂಗಳಲ್ಲಿ ೬ ಕೆ.ಜಿ. ಕೊಟ್ಟಿದ್ದರೆ ಮೇ ಮತ್ತು ಜೂನ್ ತಿಂಗಳಲ್ಲಿ ೭ ಕೆ.ಜಿ. ಕೊಟ್ಟಿದ್ದೇವೆ. ಅದೇ ಸಕ್ಕರೆ ಏಪ್ರಿಲ್ ತಿಂಗಳಲ್ಲಿ ೪ ಕೆ.ಜಿ. ಕೊಟ್ಟರೆ ಜೂನ್ ತಿಂಗಳಲ್ಲಿ ಮೂರು ಮುಕ್ಕಾಲರೆ ಕೆ.ಜಿ. ಕೊಟ್ಟಿದ್ದೇವೆ.

ಅಧ್ಯಕ್ಷರು.—ಅವರು ಸಕ್ಕರೆ ಬಗ್ಗೆ ಕೇಳುತ್ತಿದ್ದಾರೆ.

ಶ್ರೀ ಎಂ. ಡಿ. ವೆಂಕಟೇಶ್.—ಸಕ್ಕರೆ ಬೆಲೆ ಹೊರಗಡೆ ಒಂದು ಕೆ.ಜಿ.ಗೆ ೧೦ ರೂಪಾಯಿ ಇದೆ. ಬ್ಲಾಕ್ ಮಾರ್ಕೆಟ್‌ನಲ್ಲಿ ಹೊರಗಡೆ ಸಕ್ಕರೆ ವ್ಯಾಪಾರ ಮಾಡುವುದಕ್ಕೋಸ್ಕರ ಇವರು ಪಡಿತರದಲ್ಲಿ ವಿತರಣೆ ಮಾಡುವುದನ್ನು ಕಡಿಮೆ ಮಾಡಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸಕ್ಕರೆ ಅರ್ಧ ಕೆ.ಜಿ. ಕಡಿಮೆ ಮಾಡಲಾಗಿದೆ. ಏತಕ್ಕೆ ಮಾಡಲಾಗಿದೆ ಎಂಬುದನ್ನು ವಿಚಾರ ಮಾಡೋಣ.

ಶ್ರೀ ಬಿ. ಹೆಚ್. ಬನ್ನಿಕೋಡ್.—ಹಸಿರು ಕಾರ್ಡ್ ಅನ್ನು ವಾಪಸ್ಸು ತೆಗೆದುಕೊಳ್ಳುವುದರಿಂದ ಈ ರೀತಿ ಮಾಡಿಸಬಹುದು.

ಶ್ರೀ ಹರ್ಷಕುಮಾರ್ ಗೌಡ.—ಪಟ್ಟಣ ಪ್ರದೇಶಗಳಲ್ಲಿ ನ್ಯಾಯಬೆಲೆ ಅಂಗಡಿಗಳ ಮೂಲಕ ಕೊಡತಕ್ಕ ವಸ್ತುಗಳನ್ನು ಅಧಿಕಾರಿಗಳು ವ್ಯಾಪಾರಸ್ಥರ ಜೊತೆಗೆ ಷಡ್ಯಂತರ ಮಾಡಿ ಕಡಿಮೆ ಮಾಡಿದರೆ ಇಡೀ ರಾಜ್ಯದ ಕಾರ್ಡುದಾರರು ಮಾರ್ಕೆಟ್‌ನಲ್ಲಿ ೫ ರೂಪಾಯಿ, ೧೦ ರೂಪಾಯಿ ಹೆಚ್ಚಿಗೆ ಕೊಡ ಬೇಕಾಗುತ್ತದೆ. ಇದು ಯಾವಾಗಲೂ ನಡೆಯುತ್ತಿರುತ್ತದೆ. ಈ ದುರ್ವ್ಯವಹಾರವನ್ನು ತಪ್ಪಿಸಲು ಏನು ಕ್ರಮ ಕೈಗೊಳ್ಳುತ್ತೀರಿ ? ಇವತ್ತು ಬೆಂಗಳೂರು ಮತ್ತು ಮೈಸೂರುಗಳಲ್ಲಿ ಒಂದು ಲೀಟರ್ ಸೀಮೆಎಣ್ಣೆಯನ್ನು ೫ ರಿಂದ ೮ ರೂಪಾಯಿಗೆ ಮಾರಾಟ ಮಾಡುತ್ತಿದ್ದಾರೆ. ಇದರ ಬಗ್ಗೆ ತಾವು ತುರ್ತಾಗಿ ಗಮನವನ್ನು ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸೀಮೆಎಣ್ಣೆ ಬಗ್ಗೆ ವಿವರ ನನ್ನ ಹತ್ತಿರವಿಲ್ಲ, ಸಕ್ಕರೆ, ತಾಳೆಎಣ್ಣೆ ಬಗ್ಗೆ ಅವರು ಸ್ಪೆಸಿಫಿಕ್ ಆಗಿ ಪ್ರಶ್ನೆ ಕೇಳಿದ್ದಾರೆ. ಆದ್ದರಿಂದ ಅದರ ಬಗ್ಗೆ ಮಾತ್ರ ಮಾಹಿತಿ ಒದಗಿಸ ಲಾಗಿದೆ.

ಶ್ರೀ ವಾಟಾಳ್ ನಾಗರಾಜ್.—ಸೀಮೆಎಣ್ಣೆ ವಿಚಾರ ಯಾರ ಹತ್ತಿರ ಇದೆ ಎಂಬುದು ಗೊತ್ತಾಗುತ್ತಿಲ್ಲ.

ಶ್ರೀ ಎ. ಕೆ. ಅನಂತಕೃಷ್ಣ.—ನಾನು ಮಾನ್ಯ ಸಚಿವರಲ್ಲಿ ಒಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆರೆ ಏಕೆಂದರೆ, ಸರ್ಕಾರದ ಅಸಹಾಯಕತೆಯನ್ನು ನಮಗೆ ತಿಳಿಸುತ್ತಿದ್ದಾರೆ. ನಮ್ಮ ಕ್ಷೇತ್ರಗಳಿಗೆ ಹೋದ ಅಲ್ಲಿ ಜನಗಳನ್ನು ಎದುರಿಸುವುದು ನಮಗೆ ಬಹಳ ಕಷ್ಟವಾಗಿದೆ. ಅವರ ಪ್ರಶ್ನೆಗಳಿಗೆ ಉತ್ತರ ಕೊಡಲು ಕಷ್ಟವಾಗಿದೆ. ಇಷ್ಟೇ ಪದಾರ್ಥಗಳನ್ನು ಕೊಡಲು ಸಾಧ್ಯವಾಗುತ್ತದೆ, ಇದೇ ಬೆಲೆಯಲ್ಲಿ ಕೊಡುವು ದಕ್ಕಾಗುತ್ತದೆ, ಇದೇ ರೀತಿಯಲ್ಲಿ ಕೊಡುವುದಕ್ಕಾಗುತ್ತದೆ, ಎಂಬುದರ ಬಗ್ಗೆ ಬಹಿರಂಗವಾಗಿ ಜನರಿಗೆ ತಿಳುವಳಿಕೆ ಕೊಡುವ ರೀತಿಯಲ್ಲಿ ಒಂದು ಅಡ್ವಟೈಸ್‌ಮೆಂಟನ್ನು ರಿಲೀಸ್ ಮಾಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದರಲ್ಲಿ ಅಸಹಾಯಕತೆಯ ಪ್ರಶ್ನೆಯೇ ಇಲ್ಲ. ಆದರೆ ಸಿಮೀತವಾಗಿ ಇಂತಿಷ್ಟು ಪ್ರಮಾಣದಲ್ಲಿ ಕೊಡಬೇಕು ಎಂದು ನಿಗದಿಪಡಿಸಲಾಗಿದೆ, ಅದರ ಪ್ರಕಾರ ಹಂಚಬೇಕೆಂದು ಇದೆ. ಅದರಂತೆ ಸರಬರಾಜಾಗುತ್ತಿದೆ. ಎಲ್ಲಾದರೂ ನಿರ್ದಿಷ್ಟವಾದ ಸ್ಥಳದಲ್ಲಿ ಅಥವಾ ನಿರ್ದಿಷ್ಟ ಅಂಗಡಿಗಳಲ್ಲಿ ಏನಾದರೂ ದುರ್ವ್ಯವಹಾರ ನಡೆಯುತ್ತಿದ್ದರೆ, ಅದರ ಬಗ್ಗೆ ತಾವು ನಿರ್ದಿಷ್ಟವಾದ ಕಂಪ್ಲೈಂಟ್ ಕೊಟ್ಟರೆ ಅದರ ಬಗ್ಗೆ ತನಿಖೆ ಮಾಡಬಹುದು, ಮತ್ತು ಇದನ್ನು ಬಲಪಡಿಸಲಿಕ್ಕೆ ವ್ಯಾಪಕವಾಗಿ ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅದನ್ನು ಸರ್ಕಾರ ಯಾವಾಗಲೂ ಕೈಗೊಳ್ಳುತ್ತದೆ ಆದ್ದರಿಂದ ಇದರಲ್ಲಿ ಅಸಹಾಯಕತೆಯ ಪ್ರಶ್ನೆಯಿಲ್ಲ. ಯಾರು ದುರುಪಯೋಗ ಮಾಡುತ್ತಿದ್ದಾರೆ ಅವರ ಬಗ್ಗೆ ಕಠಿಣವಾದ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ ಅಥವಾ ನಿರ್ದಿಷ್ಟವಾಗಿ ಎಲ್ಲಿಯಾದರೂ ಕ್ರಮ ತೆಗೆದುಕೊಳ್ಳದಿದ್ದರೆ ಅಂತಹ ಪ್ರಕರಣ ಇದ್ದರೆ ಅದನ್ನು ಸರ್ಕಾರದ ಗಮನಕ್ಕೆ ತಂದರೆ ನಾವು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀಮತಿ ಚಂದ್ರಪ್ರಭಾ ಅರಸ್.—ಗ್ರಾಮಾಂತರ ಪ್ರದೇಶಗಳಲ್ಲಿ ಬ್ಲಾಕ್ ಮತ್ತು ತಾಲ್ಲೂಕ್ ಮಟ್ಟಗಳಲ್ಲಿ ಆಹಾರ ಪದಾರ್ಥಗಳ ವಿತರಣೆ ಸರಿಯಾಗಿ ನಡೆಯುತ್ತಿಲ್ಲ. ನಮ್ಮ ಹಳೆಯ ಮೈಸೂರು ಭಾಗದಲ್ಲಿ ಯಾರೂ ಕೂಡ ಇವತ್ತು ಗೋಧಿಯನ್ನು ಬಳಕೆ ಮಾಡುವುದಿಲ್ಲ. ಅಕ್ಕಿ ಮತ್ತು ರಾಗಿಯನ್ನು ಹೆಚ್ಚು ಉಪಯೋಗಿಸುತ್ತಾರೆ. ಆದರೆ ಅಲ್ಲಿ ಕಂಪಲ್ಸರಿಯಾಗಿ ಗೋಧಿಯನ್ನು ತೆಗೆದುಕೊಂಡರೆ ಮಾತ್ರ ಅಕ್ಕಿಯನ್ನು ಕೊಡುತ್ತೇವೆಂದು ಒತ್ತಾಯಪೂರ್ವಕವಾಗಿ ಹೇಳುತ್ತಿದ್ದಾರೆ. ನಮ್ಮ ರೈತರು ಗೋಧಿ ಯನ್ನು ತೆಗೆದುಕೊಳ್ಳುತ್ತಾ ಇಲ್ಲ. ನಗರಗಳಲ್ಲಿ ಗೋಧಿ ಬಳಕೆ ಹೆಚ್ಚಿದೆ, ಆದರೆ ಗ್ರಾಮಾಂತರ ಪ್ರದೇಶ ಗಳಲ್ಲಿ ಇದನ್ನು ಯಾರೂ ಹೆಚ್ಚಾಗಿ ಉಪಯೋಗಿಸುವುದಿಲ್ಲ. ಆದರೂ ಗೋಧಿಯನ್ನು ತೆಗೆದುಕೊಳ್ಳ ಬೇಕೆಂದು ಕಡ್ಡಾಯವಾಗಿ ಹೇಳುತ್ತಿದ್ದಾರೆ. ಬ್ಲಾಕ್‌ಮಟ್ಟದಲ್ಲಿ ಸರಿಯಾಗಿ ವಿತರಣೆಯಾಗದಿರುವ ಬಗ್ಗೆ ಮೇಲುಸ್ತುವಾರಿ ನೋಡಿಕೊಳ್ಳತಕ್ಕಂಥ ಅಧಿಕಾರಿಗಳು ಏನು ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಅದರ ಬಗ್ಗೆ ಸರ್ಕಾರ ಏನು ಶಿಸ್ತಿನ ಕ್ರಮವನ್ನು ಈಗಾಗಲೆ ಜಾರಿ ಮಾಡಿದೆ ಎನ್ನುವುದನ್ನು ತಿಳಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಸಲಹೆಯನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.— ಮಾನ್ಯ ಅಧ್ಯಕ್ಷರೆ ನಿನ್ನೆ ನಾನು ಪತ್ರಿಕೆಯಲ್ಲಿ ನೋಡಿದ್ದೇನೆ. ಸೀಮೆಎಣ್ಣೆಯನ್ನು ಗ್ಯಾಸ್ ಮತ್ತು ವಿದ್ಯುಚ್ಛಕ್ತಿ ಬಳಸುವವರಿಗೆ ಕೊಡುವುದಿಲ್ಲವೆಂದು ಹೇಳಿದ್ದಾರೆ, ಈಗ ವಿದ್ಯುಚ್ಛಕ್ತಿ ದಿನಕ್ಕೆ ಎಷ್ಟು ಸಾರಿ ಹೋಗುತ್ತಿದೆ ಎಂಬುದು ತಮಗೆ ಗೊತ್ತಿದೆ. ಗ್ಯಾಸ್ ಇದ್ದವರಿಗೆ ಸೀಮೆಎಣ್ಣೆಯನ್ನು ಕೊಡಬಾರದೆನ್ನುವ ನೀತಿ ಸರಿ, ಆದರೆ ದಿನಕ್ಕೆ ೨೫ ಸಾರಿ ವಿದ್ಯುಚ್ಛಕ್ತಿ ಹೋಗುತ್ತಿರುವುದರಿಂದ ವಿದ್ಯುಚ್ಛಕ್ತಿ ಉಪಯೋಗಿಸುವವರಿಗೆ ಸೀಮೆಎಣ್ಣೆ ಕೊಡುವುದಿಲ್ಲ ಎಂಬ ಕಟ್ಟುನಿಟ್ಟನು ತೆಗೆಯಬೇಕು ವಿದ್ಯುಚ್ಛಕ್ತಿ ಉಪಯೋಗ ಮಾಡುವವರಿಗೆ ಸೀಮೆಎಣ್ಣೆಯನ್ನು ಕೊಡಬೇಕು. ಗ್ಯಾಸ್ ಉಪಯೋಗಿಸುವವರಿಗೆ ಮಾತ್ರ ವಿಧಿಸಬೇಕು. ನಿನ್ನೆ ದಿವಸ ಮೇಲ್ಮನೆಯಲ್ಲಿ ಮಾನ್ಯ ಜಾರ್ಜ್‌ರವರ್ನ ಇದರ ಬಗ್ಗೆ ಉತ್ತರ ಕೊಟ್ಟಿದ್ದಾರೆ. ಈ ಮನೆಯಲ್ಲಿ ತಾವು ಈಗ ಉತ್ತರ ಕೊಡುತ್ತಿದ್ದೀರಿ. ಆಹಾರ ಸಚಿವರು ಎಲ್ಲಿಗೆ ಹೋಗಿದ್ದಾರೆಂದು ನನಗೆ ಗೊತ್ತಿಲ್ಲ. ಈಗ ಸೀಮೆಎಣ್ಣೆ ಪ್ರಶ್ನೆ ಇಡೀ ರಾಜ್ಯಾದ್ಯಂತ ಬಹಳ ದೊಡ್ಡ ಗೋಳಿನ ಮತ್ತು ಕಣ್ಣೀರಿನ ಕತೆಯಾಗಿದೆ. ಒಂದೊಂದು ಕಡೆ ಸೀಮೆಎಣ್ಣೆಗಾಗಿ ೨೫೦ ರಿಂದ ೫೦೦ ಜನರವರೆಗೆ ಕ್ಯೂ ನಿಂತಿರುತ್ತಾರೆ. ಇದರ ಬಗ್ಗೆ ಸರ್ಕಾರದ ನೀತಿಯನ್ನು ಸ್ಪಷ್ಟಪಡಿಸಬೇಕು.

ಶ್ರೀ ಎಂ ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ಇದರಲ್ಲಿ ಸರ್ಕಾರದ ನೀತಿ ಬಹಳ ಸ್ಪಷ್ಟವಾಗಿದೆ, ತಾವು ಈಗ ಸಲಹೆ ಕೂಟ್ಟಿದ್ದೀರಿ ಆ ಮನೆಯಲ್ಲಿ ಸಲಹೆ ಬಂದಿದೆ. ಎಲ್ಲಿ ಆಲ್‌ಎಲೆಕ್ಟ್ರಿಕ್ ಹೊಮ್ ಇದೆ. ಎಲ್ಲಿ ಗ್ಯಾಸ್ ಕನೆಕ್ಷನ್ ಇದೆ, ಆ ಮನೆಗಳಿಗೆ ಸೀಮೆ ಎಣ್ಣೆಯನ್ನು ಸರಬರಾಜು ಮಾಡುವ ಅಗತ್ಯ ಇಲ್ಲ, ಆ ರೀತಿ ಮಾಡಿದರೆ ಅದು ದುರುಪಯೋಗವಾಗುತ್ತದೆಂಬ ಪ್ರಶ್ನೆ ಬಂದಾಗ, ಅಂತಹವರಿಗೆ ಸೀಮೆಎಣ್ಣೆ ಕೊಡದೆ ಇರುವ ಈ ವಿಚಾರದ ಬಗ್ಗೆ ಪರಿಶೀಲನೆ ಮಾಡೋಣವೆಂದು ಹೇಳಿದರು.

ಶ್ರೀ ವಾಟಾಳ್ ನಾಗರಾಜ್.—ಗ್ಯಾಸ್ ಒಲೆಗಳು, ವಿದ್ಯುಚ್ಛಕ್ತಿ ಒಲೆಗಳು ಎರಡೂ ಇರುವವರಿಗೆ ಸೀಮೆಎಣ್ಣೆ ಕೊಡುವುದಿಲ್ಲವೆಂದು ಹೇಳಿದ್ದಾರೆ.

ಅಧ್ಯಕ್ಷರು.—ಯಾರಿಗೂ ಕೊಡುವುದಿಲ್ಲವೆಂದು ಹೇಳಿಲ್ಲ. ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ.

ನಿಪ್ಪಾಣಿಯಲ್ಲಿ ನ್ಯಾಯಾಲಯ ಸ್ಥಾಪನೆ

೫೫೨ (೯೭೬) ಶ್ರೀ ಸುಭಾಷ್ ಜೋಷಿ (ನಿಪ್ಪಾಣಿ) ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :

ಅ) ನಿಪ್ಪಾಣಿಯಲ್ಲಿ ನ್ಯಾಯಾಲಯ ಸ್ಥಾಪಿಸಲು ಸರ್ಕಾರ ಯೋಚಿಸಿದೆಯೇ ?

ಆ) ಹಾಗಿದ್ದಲ್ಲಿ, ಯಾವಾಗ ಸ್ಥಾಪಿಸಲಾಗುವುದು ?

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—

ಅ) ಇಲ್ಲ.

ಆ) ''ಅ'' ಗೆ ಉತ್ತರಿಸಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

SRI SUBHASH JOSHI. Mr, Speaker, I am sorry to receive this answer. The hon'ble Minister has said that if the High Court gives permission we will stablish the court. In the case of Nippani, the High Court has given its permission Buildings are there. Deliberately, Nippani is discriminated because it is a border area.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ಸಿಕ್ಕಿರುವಂಥ ಮಾಹಿತಿ ಸರಿಯಿಲ್ಲ. ಉಚ್ಚ ನ್ಯಾಯಾಲಯ ಇದಕ್ಕೆ ಅನುಮತಿ ಕೊಟ್ಟಿಲ್ಲ. ಸರ್ಕಾರದವರು ಉಚ್ಚ ನ್ಯಾಯಾಲಯಕ್ಕೆ ಇದರ ಬಗ್ಗೆ ಬರೆದಾಗ ಅವರ ಪತ್ರ ದಿನಾಂಕ ೩೧-೧೦-೮೭ರ ಪ್ರಕಾರ ನಿಪ್ಪಾಣಿ